### ಪೇಡದಂಥ ರುಚಿಯ ಭಾಷೆ

‘ಒಂದಾನೊಂದು ಕಾಲದಾಗ...’ (ಜು. 17, ಜಾಹ್ನವಿ ಹಳ್ಳೂರ) ‘ಚೆನ್ನುಡಿ’ ಲೇಖನವು ಕೊನೆಯವರೆಗೂ ಕುತೂಹಲದ ಗೂಡಾಗಿತ್ತು. ನೈಜ ಘಟನೆ ಎನ್ನುವ ಹಾಗೆ ಧಾರವಾಡ ಭಾಷಾ ಸೊಗಡಿನೊಳಗೆ ಓದುಗನನ್ನು ಮುಳುಗಿಸಿಬಿಡುತ್ತದೆ. ಕನ್ನಡ ನುಡಿ ಸೊಗಡು ಕಾಣಬೇಕೆಂದರೆ ಇಂತಹ ಪ್ರಾದೇಶಿಕ ಚಿತ್ರ ಲೇಖನಗಳು ಹೆಚ್ಚೆಚ್ಚು ಮೂಡಿಬರಲೆಂಬುದು ನಮ್ಮ ಹೆಬ್ಬಯಕೆ.



—ವೈ. ಸತೀಶ ಕುಮಾರ, ಬಂಗಾರಪೇಟೆ

### ಹೃದ್ರೋಗ; ಎಚ್ಚರಿಕೆ ಅಗತ್ಯ

‘ಹೃದ್ರೋಗ ಸಾವಿನ ವ್ಯಾಪಕತೆ ಎಚ್ಚರಿಕೆಯ ಘಂಟೆಯಾಗಲಿ’ (ಜು. 17, ವಿಶಾಖ ಎನ್.) ‘ನಿಮ್ಮೊಡನೆ’ ಬರಹ ಮಾಹಿತಿಪೂರ್ಣವಾಗಿದೆ. ರಾಜ್ಯದ ಕೆಲವು ಆಯ್ದ ಜಿಲ್ಲೆಗಳಲ್ಲಿನ ಈ ಹೃದ್ರೋಗದ ಸಾವು ಆತಂಕ ಉಂಟು ಮಾಡುವುದರ ಜೊತೆಗೆ ಕುತೂಹಲಕ್ಕೂ ಕಾರಣವಾಗಿತ್ತು.

ಕೋವಿಡ್ ಲಸಿಕೆ ಈ ಸಾವುಗಳಿಗೆ ಕಾರಣ ಎಂದವರು ಹಲವರು. ನಮ್ಮ ಯುವಜನಾಂಗ, ಬಹುತೇಕ ಶಾಲಾ ಕಾಲೇಜುಗಳ ಮಕ್ಕಳು, ಇಂದು ದೈಹಿಕ ಶ್ರಮದಿಂದ ದೂರ ಉಳಿದಿರುವುದು ಸತ್ಯ.

ಈ ಹಿನ್ನೆಲೆಯಲ್ಲಿ ಸರ್ಕಾರ ವಿದ್ಯಾರ್ಥಿಗಳಿಗೆ ವಾರಕ್ಕೆ ಎರಡು ಬಾರಿ ಎನ್.ಸಿ.ಸಿ ಮೂಲಕ ಕವಾಯತು ಇತ್ಯಾದಿಯನ್ನು ಕಡ್ಡಾಯ ಮಾಡಿದರೆ ಒಳಿತಲ್ಲವೇ? ದಿನದ ಬಹುತೇಕ ಸಮಯ ಓದಿನಲ್ಲಿ ಇಲ್ಲವೇ ಸಾಮಾಜಿಕ ಜಾಲತಾಣದಲ್ಲಿ ಮಗ್ನರಾಗಿದ್ದರೆ ಹೃದಯ ಆರೋಗ್ಯವಾಗಿರಲು ಸಾಧ್ಯವೇ?

—ರಾಜೀವ್ ಎನ್. ಮಾಗಲ್, ಹಾಸನ




### ಕಣ್ಣು ತೆರೆಸಿದ ಲೇಖನ

‘ಪಿತ್ರಾರ್ಜಿತ ಆಸ್ತಿ – ಇದು ಮನೆಮನೆ ಕುರುಕ್ಷೇತ್ರ’ (ಜು. 17, ಉಮಾ ಅನಂತ್) – ಹಿರಿಯರ ಆಸ್ತಿಯಲ್ಲಿ ಮಕ್ಕಳ ಹಕ್ಕಿನ ಬಗ್ಗೆ ಸಂಪೂರ್ಣ ಮಾಹಿತಿ ನೀಡುವ ಸಕಾಲಿಕ ಚಿಂತನೆ. ತವರುಮನೆ ಆಸ್ತಿಯಲ್ಲಿ ಹೆಣ್ಣುಮಕ್ಕಳಿಗೆ ಪಾಲು ಕೊಡುವ ಪದ್ಧತಿಯೇ ಮೊದಲು ಜಾರಿಯಲ್ಲಿರಲಿಲ್ಲ. ಈಗ ಕಾನೂನು ಬಂದರೂ, ನಡೆಯುವ ಸಂಗತಿ ವಿಚಿತ್ರ!

ಹೆಚ್ಚಿನ ಮಹಿಳೆಯರಿಗೆ ಪಾಲಿನ ಬಗ್ಗೆ ತಿಳಿದಿರುವುದಿಲ್ಲ. ಪಾಲು ಪಂಚಾಯಿತಿಯಲ್ಲಿ ಸಹೋದರಿಯನ್ನು ಸೇರಿಸಿಕೊಳ್ಳದೇ, ಕೊನೆಯಲ್ಲಿ ಸಹಿಗಾಗಿ ಮಾತ್ರ ಪಾಲು ಪತ್ರ ಅವಳ ಮುಂದೆ ಒಡ್ಡಲಾಗುತ್ತದೆ! ಸಹಿ ಹಾಕುವವಳಿಗೆ ತವರು ಮನೆಯಿಂದ ಸ್ವಲ್ಪವಾದರೂ ಕೊಡಬೇಕೆಂಬ ಕಾಳಜಿ ಅಣ್ಣ ತಮ್ಮಂದಿರಿಗೆ ಇರುವುದಿಲ್ಲ. ಒಂದು ವೇಳೆ ಅವಳು ಪಾಲು ಕೇಳಿದರೆ ಬಾಂಧವ್ಯವೇ ಮುರಿದುಬೀಳುತ್ತದೆ! ಅವಳು ಶ್ರೀಮಂತೆಯಾಗಿದ್ದರೆ, ತೊಂದರೆ ಇಲ್ಲ. ಆದರೆ ಬಡವಳಾಗಿದ್ದರೆ... ತವರಿಂದ ಬಂದ ಆಸ್ತಿ ಅವಳ ಜೀವನಕ್ಕೆ ದಾರಿಯಾಗುತ್ತದಲ್ಲವೇ? ಆಸ್ತಿಯನ್ನು ಮಗಳಿಗೆ ಬರೆದಿದ್ದರು ಕೂಡ ಅದನ್ನು ಅವಳು ಬಳಸಲು ಬಿಡದೆ ಓಡಿಸುವ ತಂತ್ರ ಹೂಡುವ ಸಹೋದರರೂ ಇದ್ದಾರೆ!

— ಸರಸ್ವತಿ ಶಂಕರ್, ಬೆಂಗಳೂರು

### ಬದಲಾಗಿದೆ ಪರಿಸ್ಥಿತಿ

ಹಿಂದಿನ ಕಾಲದಲ್ಲಿ ಹಿರಿಯರು ತಮ್ಮ ಕಾಲಾನಂತರ ಹೆಣ್ಣುಮಕ್ಕಳಿಗೆ ತವರಿನ ಕೊರತೆ ಕಾಡಬಾರದೆಂದು ತಮ್ಮ ಕಷ್ಟಾರ್ಜಿತ ಆಸ್ತಿಯನ್ನು ಗಂಡುಮಕ್ಕಳ ಸುಪರ್ದಿಗೆ ಒಪ್ಪಿಸುತ್ತಿದ್ದರು. ಆದರೆ ಈಗ ಕೆಲವು ಕುಟುಂಬಗಳಲ್ಲಿ ಪರಿಸ್ಥಿತಿ ಹಾಗಿಲ್ಲ. ಹೆಣ್ಣುಮಕ್ಕಳು ಆಸ್ತಿಗೋಸ್ಕರ ಕೋರ್ಟ್ ಮೆಟ್ಟಿಲೇರುವುದು ಅನಿವಾರ್ಯವಾಗಿದೆ. ಈ ಸಂಕಷ್ಟ ನಿವಾರಿಸಲು, ಅಪ್ಪ ಅಮ್ಮನೇ ತಮ್ಮ ಎಲ್ಲ ಮಕ್ಕಳಿಗೂ ಆಸ್ತಿಯಲ್ಲಿ ಸಮಪಾಲು ಎಂದು ನಿರ್ಧರಿಸುವುದು ಒಳಿತು.

—ಶೋಭಾ ಸಂಪತ್, ಬೆಂಗಳೂರು

### ಕಾನೂನು ಮಾರ್ಗದರ್ಶಿ

ಪಿತ್ರಾರ್ಜಿತ, ಸ್ವಯಾರ್ಜಿತ ಹಾಗೂ ಆನುವಂಶಿಕ ಆಸ್ತಿಯನ್ನು ಕಾನೂನು ಆಯಾಮದಲ್ಲಿ ಪಡೆಯಲು ಮಾರ್ಗದರ್ಶಿಯಂತಿದೆ. ಕಾನೂನು ಪರಿಣತರಾದ ಕೆ.ಎಸ್. ಗೋಪಿನಾಥ, ಹರಿಹರ ಹೆಗಡೆ ಹಾಗೂ ಹೇಮಲತಾ ಮಹಿಷಿಯವರ ಸಲಹೆಗಳು ಆಸ್ತಿ ಕುರಿತು ಸಾಮಾನ್ಯರಲ್ಲಿನ ಗೊಂದಲಗಳಿಗೆ ಪರಿಹಾರ ಕೊಡುವಂತಿವೆ. ಜಾಗ್ರತೆ, ಅರಿವನ್ನು ಕಾನೂನು ಚೌಕಟ್ಟಿನಲ್ಲಿ ಸರಳವಾಗಿ ವಿವರಿಸಿದ ಉತ್ತಮ ಲೇಖನ.

—ಕೆ.ಎಂ. ಕೊಟ್ರ ಸ್ವಾಮಿ, ಸಂಡೂರು

### ಸೂಕ್ಷ್ಮ ವಿಷಯಗಳ ಸರಳ ವಿವರಣೆ

ಆಸ್ತಿ ಕುರಿತ ಸೂಕ್ಷ್ಮ ವಿಷಯಗಳು ಜನಸಾಮಾನ್ಯರಿಗೆ ಅರ್ಥವಾಗುವಂತಿವೆ. ಇದರೊಂದಿಗೆ, ಆಸ್ತಿ ಎಂದಾಗ, ಯಾವ ಸ್ವರೂಪದ್ದು, ಅಂದರೆ ಸ್ಥಿರಾಸ್ತಿಯೋ, ಚರಾಸ್ತಿಯೋ ಎಂಬ ಬಗ್ಗೆ ಮತ್ತಷ್ಟು ಸ್ಪಷ್ಟತೆ ಬೇಕಿತ್ತು. ಭಾಗ ಆಗುವ ಸಮಯದವರೆಗೂ ಭಾಗೀದಾರರಲ್ಲಿ (ಭಾಗಗಳನ್ನು ಪಡೆಯುವವರು) ಆ ಒಟ್ಟು ಆಸ್ತಿಗಾಗಿ ಜವಾಬ್ದಾರಿ ನಿರ್ವಹಿಸಿದವರ ಪಾತ್ರವೇನು ಎಂಬ ವಿಷಯಗಳ ಬಗ್ಗೆ ಮತ್ತಷ್ಟು ಕಾನೂನಾತ್ಮಕ ವಿವರಣೆ ಇರಬೇಕಿತ್ತು ಎನಿಸುತ್ತದೆ.

— ವಿಪ್ರೇಶ ಮೇಲೂರು

### ಪರಿಣಾಮಕಾರಿ ನಿರೂಪಣೆ

‘ಎಮ್ಮೆ ನಮ್ಮಯ ಹೆಮ್ಮೆ’ (ಜು. 17, ರಾಜು ಅಡಕಳ್ಳಿ) ಹಾಸ್ಯಬರಹ ಉಲ್ಲಾಸದಾಯಕವಾಗಿತ್ತು. ಮನುಷ್ಯ ಹಾಗೂ ಎಮ್ಮೆಯ ನಡುವಿನ ಸಂಬಂಧದ ವಿಷಯವನ್ನು ಸುಂದರವಾಗಿ ನಿರೂಪಿಸಲಾಗಿದೆ. ತಮಾಷೆ ಹಾಗೂ ಅಚ್ಚರಿಯ ನುಡಿಗಟ್ಟುಗಳು ಸೂಕ್ತವಾಗಿ ತಳುಕು ಹಾಕಿಕೊಂಡಿವೆ. ಮನುಷ್ಯನಿಗೆ ಸಾಕಷ್ಟು ಪ್ರಯೋಜನಕಾರಿಯಾಗಿರುವ ಪ್ರಾಣಿಗಳೆಡೆಗಿನ ಸಹಾನುಭೂತಿಯನ್ನು ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ. ತತ್ವದ ಸ್ಪರ್ಶ ನಿರೂಪಣೆಯನ್ನು ಮತ್ತಷ್ಟು ಶ್ರೀಮಂತಗೊಳಿಸಿದೆ. ಸರಳ ಜೀವನಶೈಲಿಗೆ ವ್ಯತಿರಿಕ್ತವಾಗಿ ಮನುಷ್ಯನು ಏಕೆ ಒತ್ತಡದ ಜೀವನಶೈಲಿ ಆರಿಸಿಕೊಳ್ಳುತ್ತಾನೆ ಎಂಬ ಲೇಖಕರ ಅಚ್ಚರಿ ಸಮಂಜಸವಾಗಿದೆ.



—ಡಾ. ಓಂ ಪ್ರಕಾಶ್, ಬೆಂಗಳೂರು

### ದಿವ್ಯಾನುಭವದ ಪಾದಯಾತ್ರೆ

‘ನಡೀರೆಲ್ಲಾ ಪಂಢರೀಲಾ’ (ಜು. 10, ಬಸವರಾಜ ಸಂಪಳ್ಳಿ) ಲೇಖನ ಓದಿ ನಾನು 35 ವರ್ಷಗಳ ಹಿಂದೆ ಹರಪನಹಳ್ಳಿಯಿಂದ (ಸಂತರಾಮಪ್ಪನ ದಿಂಡಿ ಉತ್ಸವ) ಹೊರಟಿದ್ದ ದಿಂಡಿ ತಂಡದಲ್ಲಿ ಡಂಬಳದಿಂದ ಗೆಳೆಯರೊಂದಿಗೆ 17 ದಿನಗಳ ಪಾದಯಾತ್ರೆ ಮಾಡಿದ್ದು ನೆನಪಾಯಿತು. ದಾರಿಯುದ್ದಕ್ಕೂ ಪಾಂಡುರಂಗನ ಭಕ್ತರು, ತಮ್ಮ ಭಕ್ತಿಭಾವ ಮೆರೆದು ಎಲ್ಲರಿಗೂ ಊಟೋಪಚಾರ ಮಾಡಿದ್ದರು. ಪಂಢರಪುರದ ಪಾಂಡುರಂಗನ ದರ್ಶನ ದಿವ್ಯಾನುಭವ ನೀಡಿದ್ದು ಇನ್ನೂ ಮರೆತಿಲ್ಲ.

—ಸಿ.ಕೆ. ಗಣಪ್ಪನವರ ಮುಂಡರಗಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in